ದಿಃ 29-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಮುಂದುವರೆದ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಃ** ವಾದಿ ಪರವಾಗಿ ಶ್ರೀ ಎಸ್ ಎಲ್ ಎಸ್ ವಕೀಲರಿಂದ.

ಇಂದು ನಾನು ಮಾನ್ಯ ನ್ಯಾಯಾಲಯಕ್ಕೆ ಎಮ್ ಇ ನಂಬರ 663 ರ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು, ಸರ್ವೇ ನಂಬರ 40 ರ 1938-39 ರಿಂದ 1948-49 ನೇ ಸಾಲಿನ ಪಹಣಿ ಪತ್ರಿಕೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 4 ಎಂದು, ಸರ್ವೇ ನಂಬರ 25 ರ 1938-39 ರಿಂದ 1948-49 ನೇ ಸಾಲಿನ ಪಹಣಿ ಪತ್ರಿಕೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು, ಎಮ ಇ ನಂಬರ 1897 ರ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 6 ಎಂದು, ಎಮ ಇ ನಂಬರ 2800 ಹಾಗೂ 2800/2 ರ ದೃಢಿಕೃತ ನಕಲುಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿ 7 ಎಂದು, ಸರ್ವೇ ನಂಬರ 44/2 ರ 1965-66 ರಿಂದ 2001-2002 ನೇ ಸಾಲಿನ ಪಹಣಿ ಪತ್ರಿಕೆಯ ದೃಢಿಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 8 ಎಂದು ಗುರುತಿಸಲಾಯಿತು. ಆದ್ದರಿಂದ ನನ್ನ ದಾವೆಯನ್ನು ಡಿಕ್ರಿ ಮಾಡಲು ಕೋರುತ್ತೇನೆ.

**ಪಾಟೀ ಸವಾಲುಃ** 1 ರಿಂದ 3 ನೇ ಪ್ರತಿವಾದಿಗಳ ಶ್ರೀ ಎಲ್ ಎಸ್ ಎ ಪರ ವಕೀಲರಿಂದ.

ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿಪಿ 8 ರ ಪಹಣಿ ಪತ್ರಿಕೆ ನಾರಾಯಣ ಕೃಷ್ಣಸಿಂಗ್ ರವರ ಹೆಸರಲ್ಲಿ ಇದೆ ಎಂದರೆ ಸರಿ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿ ಸದರಿ ದಾಖಲೆಯು ಬ್ಲಾಕ್ ನಂಬರ 44/2 ರ 1991- 92 ರಿಂದ 1996-97 ನೇ ಸಾಲಿನ ಪಹಣಿ ಪತ್ರಿಕೆ ಎಂದು ಸೂಚಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ಪರಿಶೀಲಿಸಿ ಹೌದು ಎನ್ನುತ್ತಾರೆ. ಸದರಿ ಪಹಣಿ ಪತ್ರಿಕೆಯನ್ನು ನಿಡಿ 1 ಎಂದು ಗುರುತಿಸಲಾಯಿತು.

ಸರ್ವೇ ನಂಬರ 44/2 ರ ಜಮೀನು ಮೂಲತಃ ಜೀವನರಾವ್ ಶಿವರಾವ್ ಬದ್ರಿ ರವರ ಜಮೀನು ಆಗಿತ್ತು ಹಾಗೂ ಅದರ ಒಟ್ಟು ವಿಸ್ತೀರ್ಣ 17 ಎಕರೆ 27 ಗುಂಟೆ ಆಗಿತ್ತು ಎಂದರೆ ಸರಿ. ಸದರಿ ಒಟ್ಟು ವಿಸ್ತೀರ್ಣದ ಪೈಕಿ 8 ಎಕರೆ ಜಮೀನನ್ನು ಶ್ರೀ ನಾರಾಯಣಸಿಂಗ್ ಕೃಷ್ಣಸಿಂಗ್ ಠಾಕೂರ್ ರವರು ರೈತನಾತೆಯಿಂದ ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿ. ಸದರಿ 8 ಎಕರೆ ಜಮೀನಿಗೆ ನಿಪಿ 6 ಪ್ರಕಾರ ನಾರಾಯಣಸಿಂಗ್ ಕೃಷ್ಣಸಿಂಗ್ ಠಾಕೂರ್ ರವರಿಗೆ ಸರ್ಕಾರವು

ಅಧಿಭೋಗದಾರಿಕೆ ಹಕ್ಕನ್ನು ನೀಡಿತು ಎಂದರೆ ಸರಿ. ಸದರಿ ನಾರಾಯಣಸಿಂಗ್ ಕೃಷ್ಣಸಿಂಗ್ ಠಾಕೂರ್ ರವರ ಮಗ ಮಂಜುಸಿಂಗ್ ಎಂದರೆ ಸರಿ. ಸದರಿ ನಾರಾಯಣಸಿಂಗ್ ಕೃಷ್ಣಸಿಂಗ್ ಠಾಕೂರ್ ರವರಿಗೆ ಸುನೀತಾ ಮತ್ತು ಅಂಜನಾ ಎಂಬ ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ ಎಂದರೆ ಸರಿ.

ನಂತರ ಮಂಜುಸಿಂಗ್ ನಾರಾಯಣಸಿಂಗ್ ಠಾಕೂರ್ ರವರು ದಿನಾಂಕ 20-02-2017 ರಂದು ತೀರಿಕೊಂಡ ಪ್ರಯುಕ್ತ ಸದರಿ 8 ಎಕರೆ ಜಮೀನಿಗೆ ಆತನ ಹೆಂಡತಿಯಾದ ಜ್ಯೋತಿ ರವರ ಹೆಸರು ದಾಖಲಾಯಿತು ಎಂದು ಸಾಕ್ಷಿಗೆ ಎಮ್ ಆರ್ ನಂಬರ 31/2016-17 ಅನ್ನು ತೋರಿಸಿ ಸೂಚನೆ ಹಾಕಿದ್ದು, ಸದರಿ ಸೂಚನೆಯನ್ನು ಸಾಕ್ಷಿಯು ದಾಖಲೆಯನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ದಾಖಲೆಯನ್ನು ನಿಡಿ 2 ಎಂದು ಗುರುತಿಸಲಾಯಿತು.

ವಾದ ಪತ್ರವನ್ನು ನಾನು ನೀಡಿದ ಮಾಹಿತಿಯ ಆಧಾರದ ಮೇಲೆ ನನ್ನ ವಕೀಲರು ತಯಾರಿಸಿದ್ದಾರೆ ಎಂದರೆ ಸರಿ. ಸದರಿ ಮಂಜುಸಿಂಗ್ ನಾರಾಯಣಸಿಂಗ್ ಠಾಕೂರ್ ರವರು ತೀರಿಕೊಂಡ ನಂತರ ಆತನ ಸರಳ ವಾರಸುದಾರರಾದ 1 ರಿಂದ 3 ನೇ ಪ್ರತಿವಾದಿಗಳ ಹೆಸರು ದಾವಾ ಸ್ವತ್ತುಗಳಿಗೆ ದಾಖಲಾಯಿತು ಎಂದು ವಾದ ಪತ್ರದಲ್ಲಿ ಹೇಳಿ ಬರೆಸಿದ್ದೇನೆ ಎಂದರೆ ಸರಿ.

ದಾವಾ ಆಸ್ತಿಯನ್ನು ನಾವು ಕಳೆದ 40 ವರ್ಷಗಳಿಂದ ಜೀವನರಾವ್ ಬದ್ರಿ ರವರ ಅಡಿಯಲ್ಲಿ ರೈತನಾತೆಯಿಂದ ಸಾಗುವಳಿ ಮಾಡಿಕೊಂಡು ಬರುತ್ತಿದ್ದೇವು. ಸರ್ವೇ ನಂಬರ 44/2 ರ ಒಟ್ಟು 17 ಎಕರೆ 27 ಗುಂಟೆ ಜಮೀನಿನ ಪೈಕಿ 8 ಎಕರೆ ಜಮೀನು ನಾರಾಯಣಸಿಂಗ್ ಠಾಕೂರ ರವರ ಹೆಸರಲ್ಲಿ ರೈತನಾತೆಯಿಂದ ದಾಖಲಾದ ನಂತರ ಉಳಿದ ಜಮೀನು ನಿಮ್ಮ ಪೂರ್ವಜರ ಹೆಸರಲ್ಲಿ ದಾಖಲಾಯಿತೇ ಎಂದರೆ ಸಾಕ್ಷಿಯು ಈ ಮೊದಲು ಪೂರ್ತಿ ಕ್ಷೇತ್ರವನ್ನು ನನ್ನ ಅಜ್ಜನಾದ ದೇವಿಸಿಂಗ್ ತಂದೆ ಲಕ್ಷ್ಮಣಸಿಂಗ್ ರಜಪೂತ್ ರವರು ಸಾಗುವಳಿ ಮಾಡುತ್ತಿದ್ದರು ಹಾಗೂ ಮಂಜುಸಿಂಗ್ ಠಾಕೂರ್ ರವರು ಕೇವಲ 9 ಎಕರೆ ಜಮೀನನ್ನು ನೀಡಿದ್ದು, ಉಳಿದ 8 ಎಕರೆ ಜಮೀನನ್ನು ತಮ್ಮ ರಜಪೂತ್ ಕುಟುಂಬಕ್ಕೆ ನೀಡಿಲ್ಲ ಎನ್ನುತ್ತಾರೆ.

(**ನ್ಯಾಯಾಲಯದ ಟಿಪ್ಪಣಿಃ 1 ರಿಂದ 3 ನೇ** ಪ್ರತಿವಾದಿಗಳ ಪರ ವಕೀಲರು ಸಾಕ್ಷಿದಾರನಿಗೆ ನೇರವಾದ ಹಾಗೂ ತಿಳಿಯುವ ಹಾಗೆ ಪ್ರಶ್ನೆಗಳನ್ನು ಕೇಳುತ್ತಿದ್ದರೂ ಸಾಕ್ಷಿದಾರನು ವಕೀಲರಿಗೆ ಮರು ಪ್ರಶ್ನೆ ಹಾಕುತ್ತಿದ್ದು ಹಾಗೂ ದಾಖಲೆಗಳನ್ನು ನೀವೆ ನೋಡಿಕೊಳ್ಳಿ ಎಂದು ಎದುರು ಉತ್ತರ ನೀಡುತ್ತಿದ್ದು, ಆತನಿಗೆ ಎಚ್ಚರಿಕೆ ನೀಡಿ ಹಾಗೂ ರೂ. 500/- ದಂಡ ವಿಧಿಸಿ ಮುಂದುವರೆದ ಪಾಟೀ ಸವಾಲನ್ನು ಕೆಳಗಿನಂತೆ ದಾಖಲಿಸಿಕೊಳ್ಳಲಾಯಿತು.)

O.S.No11/2021 further chief of PW1

ಮಂಜುಸಿಂಗನು ನಮ್ಮ ಕುಟುಂಬಕ್ಕೆ 9 ಎಕರೆ ಜಮೀನನ್ನು ನೀಡಿದ ಕುರಿತು ದಾಖಲೆಯನ್ನು ಹಾಜರುಪಡಿಸಿಲ್ಲ. 40 ವರ್ಷಗಳಿಂದ ದಾವಾ ಆಸ್ತಿಗಳನ್ನು ಸಾಗುವಳಿ ಮಾಡುತ್ತಿರುವ ಬಗ್ಗೆ ಸರ್ಕಾರಕ್ಕೆ ಕಂದಾಯ ಕಟ್ಟಿರುವ ರಸೀದಿಗಳನ್ನು ಇವೆಯಾ ಎಂದರೆ ಸಾಕ್ಷಿಯು ಠಾಕೂರ್ ಕುಟುಂಬದವರೆ ದಾವಾ ಆಸ್ತಿಗಳನ್ನು ಸಾಗುವಳಿ ಮಾಡುತ್ತಿದ್ದರಿಂದ ರಜಪೂತ್ ಕುಟುಂದಬವರು ಕಂದಾಯ ಕಟ್ಟುವ ಸಂದರ್ಭ ಬರಲಿಲ್ಲ ಎನ್ನುತ್ತಾರೆ.

ಈ ದಾವೆಯ 4 ಮತ್ತು 5 ನೇ ಪ್ರತಿವಾದಿಗಳು 1 ರಿಂದ 3 ನೇ ಪ್ರತಿವದಿಗಳ ವಿರುದ್ಧ ಇದೇ ನ್ಯಾಯಾಲಯದಲ್ಲಿ ವಾಟಣಿ ದಾವೆ ಸಲ್ಲಿಸಿದ್ದಾರೆ ಎನ್ನುವುದು ಗೊತ್ತು. ನಾವು ಯಾವ ಕಾಲಕ್ಕೂ ದಾವಾ ಆಸ್ತಿಗಳನ್ನು ಸಾಗುವಳಿ ಮಾಡಿಲ್ಲ ಹಾಗೂ ಈ ದಾವೆಯ 4 ಮತ್ತು 5 ನೇ ಪ್ರತಿವಾದಿಗಳ ಕುಮ್ಮಕ್ಕಿನಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ಅದೇ ರೀತಿ ಈ ದಾವೆಯ 4 ಮತ್ತು 5 ನೇ ಪ್ರತಿವಾದಿಗಳ ಚಿತಾವಣೆಯಿಂದ ಈ ದಾವೆಯ 1 ನೇ ಪ್ರತಿವಾದಿಯ ವಿರುದ್ಧ ಕಬ್ಜಾನಾತೆ ಮೂಲಕ ಮಾಲಕನಾಗಬೇಕು ಎಂದು ಇನ್ನೊಂದು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದ ಪತ್ರ ಮತ್ತು ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. 4 ಮತ್ತು 5 ನೇ ಪ್ರತಿವಾದಿಗಳ ಚುನಾವಣೆಯಿಂದ 1 ರಿಂದ 3 ನೇ ಪ್ರತಿವಾದಿಗಳಿಗೆ ತೊಂದರೆ ಕೊಡಲು ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u> 4 ಮತ್ತು 5** ನೇ ಪ್ರತಿವಾದಿಗಳು ಹಾಗೂ ಅವರ ವಕೀಲರು ಗೈರು ಹಾಜರು ಇರುವುದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸರಿ ಅದೆ

ದಿವಾಣಿ ನ್ಯಾಯಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.